ಮೈಸೂರು ವಿಧಾನಸಭೆ
MYSORE LEGISLATIVE ASSEMBLY

Monday, 21st May 1973/Vaishaka 31, 1895 S.E.

The House met in the Assembly Chamber, Vidhana Soudha, at One of the Clock.

STARRED QUESTIONS
(to which oral answers were given)

CARE FOOD FOR MIDDAY MEALS

921. Sri B. S. VEERABHADRAPPA (Kudligi).—

Will the Minister for Education be pleased to state :—

(*a*) the quantity of each of the food articles supplied by CARE Association during 1971-72 and 1972-73 for midday meals in the State ;

(*b*) the quantum of food articles supplied to each District during 1971-72 and 1972-73, the basis on which the quantity was fixed ;

(*c*) the expenditure incurred by Government towards the salary allowances and other items on CARE authorities during the said two years ;

(*d*) the quantum of food articles supplied by CARE Association to each of the taluks of Bellary District during 1971-72 and 1972-73 ?

Sri A. R. BADARINARAYANA (Minister for Education).—

	1971–72	1972–73
	(In pounds)	
(*a*) Food articles	3,89,17,148	4,64,01,282
Oil	54,70,455	92,10,659

(*b*) The statement is placed on the Table of the House. On the basis of the number of beneficiaries in each district.

(*c*)— 1971–72 Rs. 17,99,450–00 1972–73 Rs. 16,70,800–00

(*d*) The Statement is placed on the Table of the House.

---

*Copy placed in the Mysore Legislature Library *vide* No. 42/ dated 21st May 1973.

ಶ್ರೀ ಬಿ. ಎಸ್. ವೀರಭದ್ರಪ್ಪ.—ಸ್ವಾಮಿ, ತಾವು ಜಿಲ್ಲಾವಾರು ಕೊಟ್ಟಿಂಥ ಅಂಕಿ ಸಂಖ್ಯೆಗಳನ್ನು ನೋಡಿದರೆ ಕೆಲವು ಜಿಲ್ಲೆಗಳಲ್ಲಿ ಹೆಚ್ಚಾಗಿಯೂ ಕೆಲವು ಜಿಲ್ಲೆಗಳಲ್ಲಿ ಬಹಳ ಕಡಿಮೆಯಾಗಿಯೂ ಇರುವುದರಿಂದ ಇದರ ಹಂಚಿಕೆ ಸಮರ್ಪಕವಾಗಿಲ್ಲ ಎಂದು ನಾನು ಭಾವಿಸಿದ್ದೇನೆ. ಆದುದರಿಂದ ಮುಂದೆ ಈ ರೀತಿ ವ್ಯತ್ಯಾಸ ಆಗದಂತೆ ಪ್ರತಿಯೊಂದು ಜಿಲ್ಲೆಯಲ್ಲೂ ಇರುವ ಮಕ್ಕಳ ಸಂಖ್ಯೆ ಆಧಾರದ ಮೇಲೆ ಕೊಟ್ಟು ಅವರನ್ನು ಬದುಕಿಸಲು ಏರ್ಪಾಡು ಮಾಡುತ್ತೀರಾ ?

†ಶ್ರೀ ಎ. ಆರ್. ಬದರಿ ನಾರಾಯಣ್.—ಅಗತ್ಯವಾಗಿ ಮಾಡುತ್ತೇನೆ. ನಾನು ಈ ಫಿಗರ್ಸ್ ನೋಡಿದಾಗ ನಮ್ಮ ಜಿಲ್ಲೆಯಲ್ಲಿ ಏತಕ್ಕೆ ಬಹಳ ಕಡಿಮೆಯಾಗಿದೆ ಎಂದು ನನಗೆ ಅನಿಸಿದೆ. ಆದುದರಿಂದ ಇದನ್ನು ರ್ಯಾಷನ-ಲೈಸ್ ಆಗಿ ಹಂಚುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಈ ಒಂದು ಹಂಚಿಕೆ ಸಮರ್ಪಕವಾಗಿ ಆಗದಂತೆ ಮಾಡಲು ತಾಲ್ಲೂಕಾ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಿದರೆ ಬಹಳ ಸೂಕ್ತ ಏತಕ್ಕೆಂದರೆ ಈಗ ಬರೀ ವಿದ್ಯಾಧಿಕಾರಿಗಳು ಏನು ಹಂಚಿಕೆ ಮಾಡುತ್ತಿದ್ದಾರೋ ಅದನ್ನು ಬಿಟ್ಟು ವಿದ್ಯಾಧಿಕಾರಿಗಳು, ಬಿ.ಡಿ.ಓ. ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್ ಮತ್ತು ಎಂ.ಎಲ್.ಎ. ಇವರನ್ನೊಳಗೊಂಡ ಒಂದು ಸಲಹಾ ಸಮಿತಿ ಮಾಡಿದರೆ ಈ ಅವ್ಯವಹಾರವನ್ನು ನೋಡಿಕೊಳ್ಳುವುದಕ್ಕೆ ಒಳ್ಳೆಯದಾಗುವುದಿಲ್ಲವೇ ?

Sri A. R. BADARINARAYAN.—It is a good suggestion which I have considered.

ಶ್ರೀ ಬಿ. ಎಸ್. ವೀರಭದ್ರಪ್ಪ.—ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನಲ್ಲಿ ಆಹಾರ ಪದಾರ್ಥವನ್ನು ಹೆಚ್ಚಾಗಿ ಒದಗಿಸಿ ಕೊಡಬೇಕೆಂದು ನಾನು ತಮ್ಮನ್ನು ವಿನಂತಿಸಿ ಕೊಳ್ಳುತ್ತೇನೆ. ಆ ರೀತಿ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿ ನಾರಾಯಣ್.—ಆ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ. ಕೆಲವು ಕಡೆ 50 ಲಕ್ಷ ಆಹಾರ ಪದಾರ್ಥಗಳನ್ನು ಕೊಟ್ಟಿದ್ದಾರೆ. ಕೆಲವು ಕಡೆ ಕಡಿಮೆ ಕೊಟ್ಟಿದ್ದಾರೆ, ಅದನ್ನು ರ್ಯಾಷನಲೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಸ್ವಾಮಿ, ಈಗ ಇದ್ದಂಥ ಹಂಚಿಕೆಯಲ್ಲೇ ಕ್ಷಾಮಪೀಡಿತ ಪ್ರದೇಶದ ಮಕ್ಕಳಿಗೆ ಹೆಚ್ಚು ಕೊಡುವ ಹಾಗೆ ಕಲ್ಪಿಸಿಕೊಡುತ್ತೀರಾ ?

ಶ್ರೀ ಎ. ಆರ್. ಬದರಿ ನಾರಾಯಣ್.—ಕ್ಷಾಮಪೀಡಿತ ಪ್ರದೇಶಗಳಿಗೆ ವಾಸ್ತವಿಕವಾಗಿ ಹೆಚ್ಚು ಕೂಡ ಬೇಕೆಂದು ತೀರ್ಮಾನ ಮಾಡಿದ್ದೇವೆ. ಅದೇ ರೀತಿ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇ ಗೌಡ.—ಎಷ್ಟೋ ಸಂದರ್ಭಗಳಲ್ಲಿ ಕೊಟ್ಟಿಂಥ ಆಹಾರ ಪದಾರ್ಥಗಳನ್ನು ಹೆಚ್ಚು ಭಾಗ ಹೋಟೆಲುಗಳಿಗೆ ಮಾರಿಬಿಟ್ಟು ಕಡಿಮೆ ತೆಗೆದುಕೊಂಡು ಹೋದಂತೆ ತೋರಿಸುತ್ತಾರೆ. ಆದುದರಿಂದ ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನಾದರೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಮಕ್ಕಳಿಗೆ ಕೊಡತಕ್ಕಂಥ ಆಹಾರ ಪದಾರ್ಥಗಳನ್ನು ಹೋಟೆಲಿಗೆ ಕೊಡುವುದಾದರೆ ಅದು ಖಂಡನೀಯವಾದ ವಿಚಾರ. ಅಂಥಾದ್ದು ಯಾವುದೂ ಗಮನಕ್ಕೆ ಬಂದಿಲ್ಲ. ಅಂಥಾದ್ದೇನಾದರೂ ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತೇವೆ. ಇದಕ್ಕೆ ಸಾರ್ವಜನಿಕರ ಸಹಕಾರ ಬೇಕು. ಇದೇ ರೀತಿ ಕಡೂರಿನಲ್ಲಿ ಹೀಗಾಯಿತು ಎಂದು ವರ್ತಮಾನ ಬಂದಾಗ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಅನ್ಯಾಯ ಇದೆ ಎನ್ನತಕ್ಕಂಥಾದ್ದನ್ನು ಸಾರ್ವಜನಿಕರೂ ಮತ್ತು ಶಾಸಕರೂ ಸಪ್ತ ಶಿಳಿಸಿದರೆ ಅದನ್ನು ಬಂದೋಬಸ್ತು ಮಾಡುವುದಕ್ಕೆ ಅವಕಾಶ ವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಸ್ವಾಮಿ. ಕೇರ್ ಸಂಸ್ಥೆಯವರು ರವೆ ಕಳುಹಿಸಿರತಕ್ಕಂಥಾದ್ದರಲ್ಲಿ ಹುಳು ಬಿದ್ದಿರುತ್ತದೆ. ಎಣ್ಣೆ ದುರುಪಯೋಗವಾಗುತ್ತಿದೆ. ಆದುದರಿಂದ ಅದರ ಉಸ್ತುವಾರಿ ನೋಡಿ ಕೊಳ್ಳಲು, ಮಕ್ಕಳಿಗೆ ಕೊಡತಕ್ಕಂಥ ಆಹಾರ ಪದಾರ್ಥಗಳ ಮೇಲ್ವಿಚಾರಣೆ ನೋಡಿಕೊಳ್ಳಲು ತಾಲ್ಲೂಕಾ ಮಟ್ಟದಲ್ಲಿ ಕಾರ್ಪೊರೇಟರುಗಳ ಮತ್ತು ಎಂ.ಎಲ್.ಎ. ಗಳನ್ನೊಳಗೊಂಡ ಒಂದು ಸಮಿತಿ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಈ ಸಂಬಂಧವಾಗಿ ಮಾನ್ಯ ವೀರಭದ್ರಪ್ಪನವರು ಒಂದು ಸಲಹೆ ಕೊಟ್ಟಿದ್ದಾರೆ. ಅದು ಒಳ್ಳೆಯ ಸಲಹೆ ಎಂದು ಈಗಾಗಲೇ ಹೇಳಿದ್ದೇನೆ.

---

†Asterisk indicate that the remarks or speeches have not been revised by the member concerned.

ಶ್ರೀ ಬಿ. ಎಸ್. ವೀರಭದ್ರಪ್ಪ.—ಸ್ವಾಮಿ, ಈ ಆಹಾರ ಪದಾರ್ಥಗಳನ್ನು ತಾಲ್ಲೂಕ ಮಟ್ಟದಿಂದ ಆಯಾಯ ಕೇಂದ್ರಗಳಿಗೆ ಸಾಗಿಸಲು ಮನಾಪಲಿ ಆಗಿರುವ ಬಸ್ ರೂಟ್‌ನಲ್ಲಿ ಅದನ್ನು ತೆಗೆದುಕೊಂಡು ಹೋಗುವುದು ಕಷ್ಟವಾಗಿದೆ. ಆ ಬಸ್‌ನವರು ಇದನ್ನು ಹಾಕಿಸಿಕೊಳ್ಳುವುದಿಲ್ಲ. ಇದರಿಂದ ಕೆಲವು ಸಂದರ್ಭಗಳಲ್ಲಿ ಅಲ್ಲಿರುವ ಮಕ್ಕಳು 2-3 ದಿವಸ ಉಪವಾಸ ಬೀಳಬೇಕಾಗುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ತಾಲ್ಲೂಕು ಮಟ್ಟದಿಂದ ಪ್ರತಿಯೊಂದು ಶಾಲೆಗೂ ಬೇರೆ ರೀತಿಯಾಗಿ ಯಾವುದಾದರೂ ವಾಹನದಲ್ಲಿ ಸಾಗಿಸುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಆ ರೀತಿ ಮಾಡುವುದಕ್ಕೆ ಏನಾದರೂ ಸಾಧ್ಯತೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

VILLAGES WITHOUT PROPER ROADS IN ANKOLA TALUK

892. Smt. RADHA BHATT (Ankola).—

Will the Minister for Public Works and Electricity be pleased to state :—

(*a*) the number of villages without proper roads in Ankola Taluk of North Kanara District ;

(*b*) the number of roads constructed since last two years and the cost incurred on them by the Taluk Development Board ?

Sri H. M. CHANNABASAPPA (Minister for Public Works and Electricity).—

(*a*) 28 Villages.

(*b*) This does not relate to Public Works Department.

ಶ್ರೀಮತಿ ರಾಧಾಭಟ್.—ತಾವು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ 28 ಹಳ್ಳಿಗಳು ಎಂದು ಹೇಳಿದ್ದೀರಾ ? ಅಲ್ಲಿ ಒಂದು ರಸ್ತೆಯ ಸೌಕರ್ಯವೂ ಇಲ್ಲ. ಆದುದರಿಂದ ಮುಂದಾದರೂ ಈ ರಸ್ತೆಯನ್ನು ನಿರ್ಮಾಣ ಮಾಡಿ ಆ ಹಳ್ಳಿಗರ ಕಷ್ಟವನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದಕ್ಕೆ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಲ್ಲಿ ಹಾಕಿ ಮಾಡಬೇಕು. ಆದುದರಿಂದ ಈಗಾಗಲೇ ಎಲ್ಲಾ ಹಳ್ಳಿಗಳಿಗೂ ರಸ್ತೆಗಳನ್ನು ಕೊಡಬೇಕೆಂದು ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಲು ಯೋಚನೆ ಮಾಡಿದ್ದೇವೆ.

ಶ್ರೀಮತಿ ರಾಧಾಭಟ್.—ಈ ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಲ್ಲಿ ಈ 28 ಹಳ್ಳಿಗಳ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಈಗಾಗಲೇ ಈ ಬಗ್ಗೆ ಸಭೆಯಲ್ಲಿ ಹೇಳಿದ್ದೇನೆ. 5 ವರ್ಷದ ಯೋಜನೆಯಲ್ಲಿ ಪ್ರತಿಯೊಂದು ಹಳ್ಳಿಗೂ ರಸ್ತೆಯನ್ನು ಮಾಡಿಸಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ಅದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಅದರಲ್ಲಿ ಯಾವ ಯಾವ ರೋಡುಗಳನ್ನು ಸೇರಿಸಬೇಕೆಂದು ಆಯಾಯ ಸ್ಥಳದ ಎಂ. ಎಲ್. ಎ. ಗಳ ಸಲಹೆಗಳನ್ನು ಕೇಳಿಕೊಂಡು ಮಾಡಿದ್ದೇವೆ. ಅದಕ್ಕೆ ತಾವೂ ಕೂಡಾ ಸಲಹೆ ಕೊಟ್ಟಿದ್ದೀರಾ. ಅದನ್ನು ಮಾಸ್ಟರ್ ಪ್ಲಾನಿನಲ್ಲಿ ಸೇಸಿರಿ ಕೊಳ್ಳುತ್ತೇವೆ.

FISHERY ROAD AT HARWAD

894. Smt. RADHA BHATT (Ankola).—

Will the Minister for Public Works and Electricity be pleased to state :—

(*a*) the stage of the Fishery Road work at Harwad, Ankola Taluk, North Kanara District which was sanctioned earlier ;

(*b*) when the work will be completed ?